ಕುಮುದಾ ಪುರುಷೋತ್ತಮ್

# ನನಗೂ ಪ್ರಶಸ್ತಿ ಬಂತು!

ಗೋದೂಳೀ ಸಮಯ. ಕ್ಷಮಿಸಿ. ಹಾಗಂದಕೂಡ್ಲೆ ನಿಮ್ಮ ಕಾವ್ಯಾರಾಧನೆಯ ರಸಿಕತೆಯನ್ನು ಹರಿಬಿಟ್ಟು ಧೀರ ಸಮೀರೇ, ಯಮುನಾತೀರೇ, ಕುಂಜಕುಟೀರೇ ಅಂತ ಏನೇನೋ ಕಲ್ಪನೆ ಮಾಡ್ಕೋಬೇಡಿ. ಗೋದೂಳೀ ಸಮಯ ಅಂದ್ರೆ ಗೋದೂಳೀ ಸಮಯ ಅಷ್ಟೇ. ರೌದ್ರ, ಭೀಭತ್ಸ, ಭಯಾನಕವಾಗಿ ಅಂತ್ಯಕಾಣದ ಟೀವಿ ಧಾರಾವಾಹಿಯ ಚಟ ಹಿಡಿಸಿಕೊಂಡು ನೋಡಲೂ ಆಗದೆ ಬಿಡಲೂ ಆಗದೆ ಒದ್ದಾಡುತ್ತಾ ಕುಳಿತಿದ್ದೆ. ನನ್ನ ಪುಣ್ಯಕ್ಕೆ ಫೋನ್ ರಿಂಗಣಿಸಿತು.

'ಹಲೋ, ನಾನು ಹನುಮೇಶಪ್ಪ. ಅಭಿನಂದನೆಗಳು' ಎಂದಿತು ಗಂಡು ಕಂಠ.

'ನಿಮ್ಮ ಪರಿಚಯ ನನಗಿಲ್ಲ. ಅದ್ಸರಿ. ಅಭಿನಂದನೆಗಳೇಕೆ?'

'ನಾನು ವಾನರ ಸೇವಾಸಂಘದ ಕಾರ್ಯದರ್ಶಿ ಹನುಮೇಶಪ್ಪ. ನಮ್ಮ ಸಂಘದ ವತಿಯಿಂದ ಪ್ರತಿ ವರ್ಷಕೊಡುವ ಮಂಗಮ್ಮ ಸಾಹಿತ್ಯ ಪ್ರಶಸ್ತಿಗೆ ಈ ಬಾರಿ ನೀವು ಆಯ್ಕೆಯಾಗಿದ್ದೀರ. ಮತ್ತೊಮ್ಮೆ ಅಭಿನಂದನೆಗಳು.'

ಆತ ಫೋನಿನಲ್ಲಿ ಮಾತನಾಡುತ್ತಲೇ ಇದ್ದ. ನನ್ನ ಮೆದುಳು ಅರ್ಧಪ್ರಜ್ಞಾಸ್ಥಿತಿ ತಲಪಿಬಿಡ್ತು! ಇದೇನು ಕನಸೋ ನನಸೋ? ನನಗೆ ಪ್ರಶಸ್ತಿ!? ನನ್ನ ಬರಹಗಳೆಲ್ಲಾ ಬೆಳಕು ಕಂಡಿದ್ದಕ್ಕಿಂತ ಕಸದ ಬುಟ್ಟಿ ಸೇರಿದ್ದೇ ಹೆಚ್ಚು. ದೇಶದಲ್ಲಿ ಹೆಸರಾಂತ ಬರಹಗಾರರಿಗೆ ಬರ ಉಂಟಾಗಿದೆಯೇ? ಅಥವಾ

